ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಸಿಸಿಟಿಇ 01 ಸಿಒಸಿ 2020

ಆಯುಕ್ತರ ಕಚೇರಿ
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-56001
~~23ನೇ~~ 29 ಅಕ್ಟೋಬರ್ 2020

# ಸುತ್ತೋಲೆ

ವಿಷಯ: ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 2017ನೇ ಸಾಲಿನಿಂದ 2020ನೇ ಸಾಲಿನವರೆಗೆ ತೇರ್ಗಡೆಯಾಗಿರುವ ಡಿಪ್ಲೋಮಾ ಅಭ್ಯರ್ಥಿಗಳಿಗೆ ಉದ್ಯೋಗ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:16/10/2020ರಂದು ಮಾನ್ಯ ಆಯುಕ್ತರು, ಪ್ರಾಚಾರ್ಯರುಗಳಿಗೆ ವಿಡಿಯೋ ಸಂವಾದದಲ್ಲಿ ನೀಡಿರುವ ಸೂಚನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:16/10/2020ರಂದು ಮಾನ್ಯ ಆಯುಕ್ತರು, ಪ್ರಾಚಾರ್ಯರುಗಳ ಜೊತೆ ನಡೆಸಿದ ವಿಡಿಯೋ ಸಂಭಾಷಣೆಯಲ್ಲಿ ತಿಳಿಸಿದಂತೆ, ವಿವಿಧ ಔದ್ಯೋಗಿಕ ಸಂಸ್ಥೆಗಳಲ್ಲಿ ಲಭ್ಯತೆ ಇರುವ ಉದ್ಯೋಗಗಳ ಬಗ್ಗೆ ಮಾಹಿತಿ ಕಲೆ ಹಾಕಿ, ಪ್ರತಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ 2017ನೇ ಸಾಲಿನಿಂದ 2020ನೇ ಸಾಲಿನ ತನಕ ತೇರ್ಗಡೆಯಾಗಿರುವ ಡಿಪ್ಲೋಮಾ ಅಭ್ಯರ್ಥಿಗಳಿಗೆ ಉದ್ಯೋಗ ಮಾಹಿತಿ ನೀಡುವ, "ಉದ್ಯೋಗ ಮಾಹಿತಿ ವಿನಿಮಯ" ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಣಯಿಸಿದೆ.

ತತ್ಸಂಬಂಧ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು, ಸಂಸ್ಥೆಯ ನಿಯೋಜಿತ ಉದ್ಯೋಗ ಮತ್ತು ತರಬೇತಿ ಅಧಿಕಾರಿಗಳ ಮುಖಾಂತರ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಉಪನ್ಯಾಸಕರನ್ನು "ಉದ್ಯೋಗ ಮತ್ತು ತರಬೇತಿ" ಸಂಬಂಧ ವಿದ್ಯಾರ್ಥಿ ಮಾರ್ಗದರ್ಶಕರನ್ನಾಗಿ (Mentor) ನೇಮಿಸಲು ತಿಳಿಸಿದೆ. ಸಂಸ್ಥೆಯಲ್ಲಿ 2017ನೇ ಸಾಲಿನಿಂದ 2020ನೇ ಸಾಲಿನ ತನಕ ತೇರ್ಗಡೆಯಾಗಿರುವ ಡಿಪ್ಲೋಮಾ ಅಭ್ಯರ್ಥಿಗಳನ್ನು, ಪ್ರತಿ ವಿದ್ಯಾರ್ಥಿ ಮಾರ್ಗದರ್ಶಕರಿಗೆ (Mentor) ಸಮನಾಗಿ ಹಂಚಿ, ಈ ಕೆಳಕಂಡ ಕೋಷ್ಟಕದಲ್ಲಿ ಕೇಳಿರುವ ಮಾಹಿತಿಯನ್ನು corporateoutreach.dte@gmail.com ಗೆ ಒದಗಿಸಲು ಸೂಚಿಸಿದೆ.

Name of the Polytechnic with Inst. Code:
Name of the Placement officer :

| Sl.No | Name of the Mentor | Designation | No of students allotted to the Mentor (2018 to 2020 Batches) | No of Candidates placed in the present placement drive Mentor-wise | Percentage of Placement from the mentor list. |
|---|---|---|---|---|---|
| 1 | | | | | |
| 2 | | | | | |

ಸಂಸ್ಥೆಯ ನಿಯೋಜಿತ ಉದ್ಯೋಗ ಮತ್ತು ತರಬೇತಿ ಅಧಿಕಾರಿಗಳು ನೀಡಿರುವ ಉದ್ಯೋಗ ಮಾಹಿತಿಗಳನ್ನು ಪ್ರತಿ ವಿದ್ಯಾರ್ಥಿ ಮಾರ್ಗದರ್ಶಕರು (Mentor), ಸಂಸ್ಥೆಯಿಂದ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಕ್ಲಪ್ತ ಸಮಯದಲ್ಲಿ ಮಾಹಿತಿ ನೀಡಿ, ಉದ್ಯೋಗ ಸಂಬಂಧ ಸಂದರ್ಶನ ಬಗ್ಗೆ ಸೂಕ್ತ ತರಬೇತಿ ನೀಡಿ, ಉದ್ಯೋಗ ಪಡೆಯುವಲ್ಲಿ ವಿದ್ಯಾರ್ಥಿ ಸ್ನೇಹಿಯಾಗಿ ಮಾರ್ಗದರ್ಶನ ನೀಡಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ-ಸೂಕ್ತ ಕ್ರಮಕ್ಕಾಗಿ.

ಪ್ರತಿ : ಇ-ಆಡಳಿತ ವಿಭಾಗ- ಇಲಾಖೆ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.